200 (1497) ಶ್ರೀ ಆರ್. ಧ್ರುವನಾರಾಯಣ :– ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಕುರಿ ಅಭಿವೃದ್ಧಿ ಮಂಡಳಿಗೆ ನೀಡಿದ ಅನುದಾನ ಎಷ್ಟು?

(ಆ) ಕಳೆದ 5 ವರ್ಷಗಳಲ್ಲಿ ನೀಡಿದ ಅನುದಾನದ ವಿವರಗಳನ್ನು ಒದಗಿಸುವುದು?

(ಇ) ಅನುದಾನವು ವರ್ಷದಿಂದ ವರ್ಷಕ್ಕೆ ಹೆಚ್ಚಾದ ಶೇಕಡವಾರು ಪ್ರಮಾಣ ಎಷ್ಟು?

(ಈ) ಹಾಲಿ ನೀಡಲಾಗುತ್ತಿರುವ ಅನುದಾನದಲ್ಲಿ ಮಂಡಳಿಯ ಕಾರ್ಯಕ್ರಮ ಮತ್ತು ಉದ್ದೇಶಗಳನ್ನು ಜಾರಿಗೊಳಿಸಲು ಸಾಧ್ಯವಾಗುತ್ತಿದೆಯೇ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು)

(ಅ) 2007–08ನೇ ಸಾಲಿನಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ನಿಗದಿಯಾದ ಅನುದಾನದ ವಿವರ

		(ರೂ. ಲಕ್ಷಗಳಲ್ಲಿ
1	ಸಹಾಯಾನುದಾನ	50.00
2	ವಿಶೇಷ ಘಟಕ ಯೋಜನೆ	300.00
3	ಗಿರಿಜನ ಉಪ ಯೋಜನೆ	100.00
4	ಬಂಡವಾಳ	600.00
5	ಆಯವ್ಯಯ ಭಾಷಣದಲ್ಲಿ ಘೋಷಿಸಿದ ಮೊತ್ತ (ಆದರೆ, ಆಯವ್ಯಯ ಪುಸ್ತಕದಲ್ಲಿ ಅಳವಡಿಸಿರುವುದಿಲ್ಲ)	1000.00
	ಒಟ್ಟು	**2050.00**
	ಯೋಜನೇತರ ಅನುದಾನ	
1	ವೇತನ ಭತ್ಯೆ, ಇತಾದಿಗಳಿಗಾಗಿ	107.57
	ಒಟ್ಟು	**2157.57**

(ಆ) ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಕಳೆದ ಐದು ವರ್ಷಗಳಲ್ಲಿ ನೀಡಿದ ಅನುದಾನ ವಿವರಗಳು.

(ರೂ. ಲಕ್ಷಗಳಲ್ಲಿ)

ಕ್ರ.ಸಂ	ವರ್ಷ	ಯೋಜನೆ	ಯೋಜನೇತರ	ಒಟ್ಟು
1	2002–03	36.50	142.68	179.18
2	2003–04	150.47	97.12	247.59
3	2004–05	194.89	397.50	592.39
4	2005–06	300.00	99.44	399.44
5	2006–07	770.00	103.43	873.33
	ಒಟ್ಟು	**1451.86**	**840.17**	**2291.93**

(ಇ) ವರ್ಷದಿಂದ ವರ್ಷಕ್ಕೆ ಹೆಚ್ಚು : ಕಡಿಮೆ ಆದ ಶೇಕಡವಾರು ಪ್ರಮಾಣ

ಕ್ರ.ಸಂ.	ವರ್ಷ	ಯೋಜನೆ %	ಯೋಜನೇತರ %
1	2002–03	–	–
2	2003–04	(+) 312.24	(–) 31.93
3	2004–05	(+) 29.52	(+) 199.62
4	2005–06	(+) 53.93	(–) 34.99
5	2006–07	(+) 6.23	(+) 4.00
		(+) 166.23 ನಿಗದಿಯಾದ (ವಂಟನ)	(+) 4.00 ನಿಗದಿಯಾದ (ವಂಟನ)

(ಈ) ಪ್ರಸ್ತುತವಾಗಿ ನೀಡಲಾಗುತ್ತಿರುವ ಅನುದಾನದಲ್ಲಿ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ವಂಟನದ ಕೊರತೆ ಉಂಟಾಗುತ್ತದೆ.

I. ಕುರಿಗಳ ಆರೋಗ್ಯ ರಕ್ಷಣೆ : ರಾಜ್ಯದಲ್ಲಿ 2003ನೇ ಜಾನುವಾರು ಗಣತಿಯನ್ವಯ 72.55 ಲಕ್ಷ ಕುರಿಗಳು ಹಾಗೂ 44.83 ಲಕ್ಷ ಮೇಕೆಗಳಿವೆ. ಈ ಕುರಿ ಮೇಕೆಗಳಿಗೆ ಆರೋಗ್ಯ ರಕ್ಷಣೆ ಕಾರ್ಯಕ್ರಮದಡಿಯಲ್ಲಿ ವಾರ್ಷಿಕವಾಗಿ 2 ಬಾರಿ ಜಂತುನಾಶಕ ಔಷಧಿ ನೀಡಲು ರೂ. 2324.00 ಲಕ್ಷಗಳ ವಂಟನ ಬೇಕಾಗುತ್ತದೆ. ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ವಂಟನದ ಕೊರತೆ ಇದೆ.

II. ಕುರಿ ಸಂವರ್ಧನ ಕೇಂದ್ರಗಳಿಗೆ ಕಂದಕ ಬೇಲಿ ವ್ಯವಸ್ಥೆ:

ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮದಡಿಯಲ್ಲಿ 6 ಕುರಿ ಸಂವರ್ಧನಾ ಕೇಂದ್ರಗಳಿದ್ದು ಅಂದರೆ

1 ಕುರಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ ಕುಂದಾಪುರ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

2. ಬಂಡೂರು ಕುರಿ ಸಂವರ್ಧನಾ ಕೇಂದ್ರ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

3. ವಿದೇಶಿ ಕುರಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಉಳ್ಳವರ್ತಿ, ಚಳ್ಳಕೆರೆ ತಾಲ್ಲೂಕು

4. ಕುರಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಗುತ್ತಲ್, ಹಾವೇರಿ ತಾಲ್ಲೂಕು.

5. ಕುರಿ ಸಂವರ್ಧನಾ ಮತ್ತು ತರಬೇರಿ ಕೇಂದ್ರ, ಸುತ್ತಟ್ಟಿ, ಬೆಳಗಾಂ ಜಿಲ್ಲೆ.

6. ಕುರಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಅನಗವಾಡಿ, ಬೀಳಗಿ ತಾಲ್ಲೂಕು

ಈ ಪ್ರದೇಶಗಳ ಸಂರಕ್ಷಣೆಗಾಗಿ ಹಾಗೂ ಒತ್ತುವರಿ ತಡೆಯಲು ಇವುಗಳ ಸುತ್ತಲೂ ಕಂದಕ ತೆಗೆದು ಬೇಲಿ ನಿರ್ಮಾಣ ಮಾಡಲು ಕತ್ತಾಳೆ ನೆಡುವುದಕ್ಕಾಗಿ ರೂ. 89.28 ಲಕ್ಷ ಅನುದಾನದ ಅವಶ್ಯಕತೆ ಇದೆ.

III. ಕರ್ನಾಟಕ ಜನಶ್ರೀ ವಿಮಾ ಯೋಜನೆ : ಕರ್ನಾಟಕದಲ್ಲಿ ಒಟ್ಟು 72.55 ಲಕ್ಷ ಕುರಿಗಳಿದ್ದು, ಈ ಎಲ್ಲಾ ಕುರಿಗಳಿಗೆ ವಿಮಾ ರಕ್ಷಣೆ ನೀಡಲು ಒಟ್ಟು ರೂ. 36.27 ಕೋಟಿ

ವಂಟನ ಬೇಕಾಗಿದ್ದು, ಪ್ರಸ್ತುತ ನೀಡುತ್ತಿರುವ ವಂಟನದಲ್ಲಿ ಶೇ. 10ರಷ್ಟು ಕುರಿಗಳಿಗೆ ಮಾತ್ರ ವಿಮಾ ರಕ್ಷಣೆ ಒದಗಿಸಲು ಸಾಧ್ಯವಾಗುತ್ತಿದೆ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನೇನೋ ಒದಗಿಸಿದ್ದಾರೆ, ಆದರೆ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆ. ಕುರಿ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ನೀಡುತ್ತಿಲ್ಲ. ನಾನು ಕಳೆದ 5 ವರ್ಷಗಳಲ್ಲಿ ನೀಡಿದ ಅನುದಾನದ ವಿವರದ ಬಗ್ಗೆ ಪ್ರಶ್ನೆ ಕೇಳಿದ್ದೇನೆ. 2004–05 ರಲ್ಲಿ ಮಾನ್ಯ ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿದ್ದಾಗ ಕರ್ನಾಟಕ ಕುರಿ ಅಭಿವೃದ್ಧಿ ಮಂಡಳಿಗೆ 5 ಕೋಟಿ 92 ಲಕ್ಷ ರೂಗಳನ್ನು ಕೊಟ್ಟಿದ್ದಾರೆ. ಇದು ಇಳಿಮುಖವಾಗುತ್ತದೆ, ಕುರಿ ಅಭಿವೃದ್ಧಿ ಬಹಳ ಮುಖ್ಯವಾಗಿದೆ, ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ, ಆದರೆ ಇವತ್ತು ಕುರಿ ಮಾಂಸ, ಕೋಳಿ ಮಾಂಸಕ್ಕೆ ದಿನೇ ದಿನೇ ಬೆಲೆ ಏರುತ್ತಿದೆ ವಿನಃ ಕಡಿಮೆಯಾಗುವುದಿಲ್ಲ. ಆದ್ದರಿಂದ ಕುರಿ ಅಭಿವೃದ್ಧಿ ಮಂಡಳಿಗೆ ಉತ್ತೇಜನ ನೀಡಬೇಕು. ಸಚಿವರು ಉತ್ತರದಲ್ಲಿ 2005–06ರಲ್ಲಿ 3.99 ಲಕ್ಷ ರೂ. ಗಳನ್ನು ತಾವು ನೀಡಿದ್ದಾರೆ ಅಂದರೆ ಇದು ಇಳಿಮುಖವಾಯಿತು, 2004–05ರಲ್ಲಿ 5.92 ಲಕ್ಷ ರೂ. ಗಳು ನೀಡಿದ್ದು 2005–06 ರಲ್ಲಿ 3.99 ಲಕ್ಷರೂಗಳು ಆಯಿತು, 2006–07ನೇ ಸಾಲಿನದು ತಪ್ಪು ಅಂಕಿ ಪ್ರಿಂಟ್ ಆಗಿದೆ. ಮುಂಗಡಪತ್ರದಲ್ಲಿ ನಾಲ್ಕು ಕೋಟಿ ಮೂರು ಲಕ್ಷ ರೂ. ಗಳೆಂದು ಕೊಟ್ಟಿದ್ದಾರೆ. ಯೋಜನೆ, ಯೋಜನೇತರ ಸೇರಿ, ಒಟ್ಟು ಉತ್ತರದಲ್ಲಿ ಸುಮಾರು 873.33 ಲಕ್ಷ ರೂ.ಗಳು ಎಂದು ತಪ್ಪು ಮಾಹಿತಿ ಕೊಟ್ಟಿದ್ದೀರಿ. ಮುಂಗಡ ಪತ್ರವನ್ನು .ತರಿಸಿಕೊಂಡು ನೋಡಿ. ಅದರಲ್ಲಿ 4.03 ಲಕ್ಷ ರೂ. ಗಳೆಂದು ಕೊಟ್ಟಿದ್ದಾರೆ. 2004–05ರಲ್ಲಿ ಕೊಟ್ಟಂತಹ ಹಣ ಆದಮೇಲೆ ಸಂಪೂರ್ಣವಾಗಿ ಇಳಿಮುಖವಾಗಿದೆ. ಇಲಾಖೆಯ ಸಚಿವರಾಗಿ ಕುರಿ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ಕೊಟ್ಟು ಕುರಿ ಉತ್ಪಾದನೆಗೆ ವಿಶೇಷ ಆದ್ಯತೆಯನ್ನು ಕೊಡಬೇಕು. ಕ್ರಮೇಣವಾಗಿ ಅನುದಾನ ಕಡಿಮೆಯಾಗುತ್ತಿದೆ, ದಯವಿಟ್ಟು ಅನುದಾನವನ್ನು ಹೆಚ್ಚಿಗೆ ಕೊಡುವಿರಾ ಎನ್ನುವ ಬಗ್ಗೆ ಮಾನ್ಯ ಸಚಿವರು ಸದನದಲ್ಲಿ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರೇವೂ ನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು):– ನಾವು 5 ವರ್ಷದ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ, ಅವರು ಕೂಡ ಅದನ್ನು ಓದಿದ್ದಾರೆ. ಆದರೆ ಕೊನೆಯಲ್ಲಿ 2006–07ನೇ ಸಾಲಿಗೆ 873.33 ಕೋಟಿ ರೂ.ಗಳು ತಪ್ಪು ಮಾಹಿತಿ ಎಂದು

ಹೇಳುತ್ತಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿ ತಪ್ಪು ಇದ್ದರೆ ಸರಿಪಡಿಸಿ ಗೌರವಾನ್ವಿತ ಸದಸ್ಯರಿಗೆ ಮಾಹಿತಿ ಒದಗಿಸುತ್ತೇನೆ. ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇನೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ. ಅದರ ಜೊತೆಯಲ್ಲಿ ಇಳಿಮುಖವಾಗುವ ಅವಶ್ಯಕತೆ ಇಲ್ಲ ಏಕೆಂದರೆ 2002–03 ನೇ ಸಾಲಿನಲ್ಲಿ 179.18 ಲಕ್ಷ ರೂ.ಗಳು. 2003–04 ರಲ್ಲಿ 247–59 ಲಕ್ಷ ರೂ. ಗಳು, 2004–05 ರಲ್ಲಿ 592.39 ಲಕ್ಷ ರೂ.ಗಳು, 2005–06ರಲ್ಲಿ 399.44 ಲಕ್ಷ ರೂ.ಗಳು, ಇದೆ, ಆದರೆ ಕೊನೆ ಅಂಕಿ 2006–07ರಲ್ಲಿ 873.33 ಲಕ್ಷ ರೂ.ಗಳು ತಪ್ಪು ಮಾಹಿತಿ ಎಂದು ಹೇಳಿದ್ದಾರೆ. ಇದಕ್ಕೆ ಸರಿಯಾದ ಮಾಹಿತಿ ತರಿಸಿ ಕೊಡುತ್ತೇನೆ. ಅವರು ಕುರಿಯ ಬಗ್ಗೆ ಬಹಳ ಕಾಳಜಿಯಿಂದ ಕೇಳಿದ್ದಾರೆ. ಕುರಿ ಸಂರಕ್ಷಣೆಗೆ ಸರಿಯಾದ ಮಾಹಿತಿ ಇದೆ, ಕುರಿ ಕಾಯವವರಿಗೆ ಹೆಚ್ಚಿನ ಒತ್ತು ಕೊಡಬೇಕೆಂದು ಜನಶ್ರೀ ಎಂಬ ಯೋಜನೆಯನ್ನು ಪ್ರಪ್ರಥಮವಾಗಿ ತಂದಿದ್ದೇವೆ. ಇದರ ಜೊತೆಯಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ 2,118 ಘಟಕಗಳಿಗೆ 68% ಸಬ್ಸಿಡಿ ಕೊಡುತ್ತಿದ್ದೇವೆ, ಗಿರಿಜನರಿಗೆ ವಿಶೇಷ ಘಟಕ ಯೋಜನೆಯಡಿ 564 ಕುರಿ ಘಟಕಗಳಿಗೆ 75% ಸಬ್ಸಿಡಿ ಕೊಟ್ಟು ಬಡತನದ ರೇಖೆಯ ಕೆಳಗಿರುವವರಿಗೆ ಅನುಕೂಲ ಮಾಡಿಕೊಡುತ್ತಿದ್ದೇವೆ. ಇದರೊಂದಿಗೆ ಹೆಚ್ಚಿನ ಆದ್ಯತೆ ಕೊಟ್ಟು ತಾವು ಕೇಳಿರುವ ಪ್ರಶ್ನೆಗೆ ಸರಿಯಾದ ಒತ್ತು ಕೊಡುತ್ತೇವೆಂದು ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ಮಂತ್ರಿಗಳ ಹತ್ತಿರ ಕುಳಿತು ಮಾತನಾಡಿ ನಿಮ್ಮ ಸಮಸ್ಯೆಯನ್ನು ನಿವಾರಣೆ ಮಾಡಿಕೊಳ್ಳಿ. ಅವರ ಬಳಿ ಈಗ ಪೂರ್ಣ ಮಾಹಿತಿಯಿಲ್ಲ. ನೀವೆಲ್ಲಾ stand on prestige. ಕೇಳಬೇಕು.

ಶ್ರೀ ಆರ್. ಧ್ರುವನಾರಾಯಣ್ :– ಸಚಿವರು ಉತ್ತರ ಕೊಟ್ಟಿದ್ದಾರೆ, ಕುರಿಗಳ ಆರೋಗ್ಯ ಸಂರಕ್ಷಣೆಗೆ ಸಂಬಂಧಪಟ್ಟ ಹಾಗೆ ಸುಮಾರು 23.00 ಕೋಟಿ ರೂ.ಗಳ ಹಣ ಬೇಕಾಗಿದ್ದು ಆ ಹಣದ ಕೊರತೆ ಇದೆ ಎಂದು ತಿಳಿಸಿದ್ದಾರೆ, ಅದೇ ರೀತಿ ಕುರಿ ಸಂವರ್ಧನಾ ಕೇಂದ್ರಗಳ ಕಂದಕ ಬೇಲಿ ವ್ಯವಸ್ಥೆ ಎಂದಿದೆ, ಅದಕ್ಕೂ ಕೂಡ 89.00 ಲಕ್ಷ ರೂಗಳ ಅವಶ್ಯಕತೆಯಿದ್ದು ಹಣದ ಕೊರತೆ ಇದೆ ಎಂದು ಹೇಳಿದ್ದೀರಿ. ಕರ್ನಾಟಕ ಜನಶ್ರೀ ವಿಮಾ ಯೋಜನೆಯನ್ನು ಶೇ. 10 ರಷ್ಟು ಮಾತ್ರ ಕುರಿಗಳಿಗೆ ವಿಮೆಯೆಂದು ಮಾಡಿದ್ದೀರಿ. ಹೆಚ್ಚಿನ ಅನುದಾನವನ್ನು ಈ ಕುರಿ ಮಂಡಳಿಗೆ ಕೊಟ್ಟು ಏನು 72,55,000 ಕುರಿಗಳಿವೆ, ಆ ಎಲ್ಲಾ

ಕುರಿಗಳಿಗೆ ವಿಮೆ ಆಗಬೇಕು, ಶೇ. 10ರಷ್ಟು ಕುರಿಗಳಿಗೆ ವಿಮೆ ಮಾಡಿದರೆ ಸಾಲುವುದಿಲ್ಲ. ಕುರಿ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ಮಾಡಬೇಕು. ಏಕೆಂದರೆ ತಮಗೆ ಗೊತ್ತಿದೆ, ಇವತ್ತು ರೈತ ಬಹಳಷ್ಟು ಕಡೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆದರೆ ರೈತ ಬೆಳೆದಂತಹ ಬೆಳೆಗೆ ಬೆಲೆಯಿಲ್ಲ. ಆದರೆ ಕುರಿ ಮತ್ತು ಕೋಳಿಯ ಬೆಲೆ ಯಾವತ್ತೂ ಕೂಡ ಇಳಿದಿಲ್ಲ. ದಿನೇ ದಿನೇ ಅದರ ಮಾಂಸದ ಬೆಲೆ ಏರುತ್ತಿದೆ. ಆದ್ದರಿಂದ ದಯಮಾಡಿ ಈ ಕುರಿ ಅಭಿವೃದ್ಧಿ ಮಂಡಲಿಗೆ ಹೆಚ್ಚಿನ ಅನುದಾನ ಒದಗಿಸಿಕೊಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ.ಟಿ.ಬಿ. ನಾಗರಾಜು:– ಮಾನ್ಯ ಅಧ್ಯಕ್ಷರೆ, ಒಂದೇ ನಿಮಿಷ, ಇಡೀ ರಾಜ್ಯದಲ್ಲಿ ಇವತ್ತು.,

ಅಧ್ಯಕ್ಷರು:– ನಾಗರಾಜ್ ನಿಮ್ಮನ್ನು ನಾನು ಕರೆದಿಲ್ಲ, ಕುಳಿತುಕೊಳ್ಳಿ, ನೀವು ಮಾತನಾಡಲಿಕ್ಕೆ ಶುರು ಮಾಡಿದರೆ ಹೇಗೆ? ಸಚಿವರಲ್ಲಿ ವಿವರಗಳಿಲ್ಲ, ಅವರ ಬಳಿಗೆ ಹೋಗಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ ಎಂದು ಹೇಳಿದರೂ ಕೇಳುವುದಿಲ್ಲ.

ಶ್ರೀ ಎಂ.ಟಿ.ಬಿ ನಾಗರಾಜು:– ಇಡೀ ರಾಜ್ಯದಲ್ಲಿ ಕುರಿಗಳ ಉತ್ಪನ್ನ ಕಡಿಮೆಯಾಗಿದೆ, ಜನಸಂಖ್ಯೆ ಜಾಸ್ತಿಯಾಗಿದೆ, ಮಾಂಸ ತಿನ್ನುವವರ ಸಂಖ್ಯೆ ಜಾಸ್ತಿಯಾಗಿದೆ, ಹಾಗಾಗಿ ಈ ಕುರಿ ಅಭಿವೃದ್ಧಿ ನಿಗಮಕ್ಕೆ ಸಚಿವರು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು. ಕುರಿಗಳ ಉತ್ಪನ್ನ ಜಾಸ್ತಿಯಾಗಬೇಕು, ರೋಗ ರುಜಿನಗಳು ಜಾಸ್ತಿ ಬರುತ್ತಿವೆ, ಕಾಲು ರೋಗ, ಬಾಯಿ ರೋಗ, ಸಾವಿರಾರು ಕುರಿಗಳು ರಾಜ್ಯದಲ್ಲಿ ಸತ್ತಿವೆ. ಅದಕ್ಕೆ ಔಷಧಿಗಳು ಖರೀದಿ ಮಾಡಬೇಕು. ಉತ್ಪನ್ನ ಜಾಸ್ತಿ ಮಾಡಿಸಿ ಆ ನಿಗಮಕ್ಕೆ ಹೆಚ್ಚಿನ ಹಣ ಕೊಡಬೇಕು. ಪ್ರತಿ ವರ್ಷ ಮೂರು ಕೋಟಿ, ನಾಲ್ಕು ಕೋಟಿ ರೂ.ಗಳನ್ನು ಹೆಚ್ಚು ಮಾಡಬೇಕು. ಆದರೆ ನೀವು ಬಜೆಟ್‌ನಲ್ಲಿ ಕಡಿಮೆ ಮಾಡುತ್ತಿದ್ದೀರಿ. ಈಗ ಮೂರು ಕೋಟಿ ರೂ. ಗಳನ್ನು ಕೊಟ್ಟಿದ್ದಾರೆ.. ತಮ್ಮ ಮೂಲಕ ಮಂತ್ರಿಗಳನ್ನು ಒತ್ತಾಯ ಮಾಡುತ್ತೇವೆ.

ಅಧ್ಯಕ್ಷರು:– ಸಚಿವರು ಹೊಸಬರಿದ್ದಾರೆ, ಅವರ ಹತ್ತಿರ ಮಾಹಿತಿ ಇಲ್ಲ.

ಶ್ರೀ ಗೋಪಾಲಕೃಷ್ಣ:– ಅಧ್ಯಕ್ಷರೆ,

ಅಧ್ಯಕ್ಷರು:– ನಿಮ್ಮ ಸಮಸ್ಯೆಯನ್ನು ಸಚಿವರ ಹತ್ತಿರ ಕುಳಿತು ಮಾತನಾಡಿ, ಅವರು ಅಧಿಕಾರಿಗಳನ್ನು ಕರೆಸುತ್ತಾರೆ, ಅವರ ಹತ್ತಿರ ಮಾತನಾಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಲೂರು:– ನೂರಾರು ಕುರಿಗಳು ಕಾಡುಸೊಪ್ಪನ್ನು ತಿಂದು ಒಂದೇ ಸಾರಿ ಸತ್ತಿವೆ. ಆದರೆ ಅದಕ್ಕೆ ಕೊಡುವಂಥ ಯಾವುದೇ ಸೌಲಭ್ಯವನ್ನು ಆ ರೈತನಿಗೆ ಕೊಡುತ್ತಿಲ್ಲ. ಇಡೀ ಕುಟುಂಬ ನಾಶವಾಗಿ ಬಿಡುತ್ತದೆ, ಅದಕ್ಕಾಗಿ ಸಂಬಂಧಪಟ್ಟ ಸಚಿವರು ಆ ಕುರಿಗಳ ಬಗ್ಗೆ ವಿಮೆ ಕೊಡುವ ಬಗ್ಗೆ ಮಾಹಿತಿಯನ್ನು ಕೊಡಬೇಕು.

ಅಧ್ಯಕ್ಷರು:– ಸಚಿವರೇ, ನಿಮ್ಮ ಬಳಿ ಏನು ಮಾಹಿತಿ ಇದೆ ಸಾಧ್ಯವಾದಷ್ಟು ಹೇಳಿ.

ಶ್ರೀ ರೇವೂ ನಾಯಕ್ ಬೆಳಮಗಿ:– ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರು ಜನಶ್ರೀ ಕುರಿ ವಿಮೆ ಬಗ್ಗೆ 10% ಜಾಸ್ತಿ ಮಾಡಬೇಕೆಂದು ಕೇಳಿದ್ದಾರೆ. ಈಗಾಗಲೇ ನಾವು ಸರ್ಕಾರದವರು 10–20 ಕುರಿಗಳಿಗೆ ಒಂದು ಘಟಕವನ್ನು ಮಾಡಿದ್ದೇವೆ. ಮೊದಲು ಬಿ.ಪಿ.ಎಲ್ ಕಾರ್ಡ್ ಎಂದು ಪರಿಗಣನೆ ಮಾಡಿದ್ದೆವು. ಆ ಬಿಪಿಎಲ್ ಕಾರ್ಡ್‌ಗೆ ನಮ್ಮ ಕುರಿ ಕಾಯುವ ಜನಾಂದವರು ವಲಸೆ ಹೋಗಿ ಆ ಬಿಪಿಎಲ್ ಕಾರ್ಡ್‌ಗಳ ಕೊರತೆಯಾದ ತಕ್ಷಣ ಅದಕ್ಕೆ ತಹಸೀಲ್ದಾರ್‌ರವರಿಂದ ಒಂದು ಸರ್ಟಿಫಿಕೇಟ್ ತೆಗೆದುಕೊಂಡು ಸಣ್ಣ ಅತೀ ಸಣ್ಣ ಕುರಿ ಕಾಯುವ ಜನಾಂಗದವರಿಗೆ ಸರ್ಟಿಫಿಕೇಟ್ ಮಾಡಿಸಿ, 20 ಕುರಿಗಳಿಗೆ ಒಂದು ಘಟಗಳನ್ನು ಮಾಡಿ ಹೆಚ್ಚಿನ ಆದ್ಯತೆ ಕೊಡುವಂಥ ಕಾರ್ಯಕ್ರಮವನ್ನು ಈಗಾಗಲೇ ನಾವು ಮಾಡಿದ್ದೇವೆ. ಸದಸ್ಯರು ಹೇಳಿದಂತೆ 72 ಲಕ್ಷ ಕುರಿಗಳಿವೆ, 44 ಲಕ್ಷ ಮೇಕೆಗಳಿವೆ. ಎಲ್ಲಾ ಕುರಿ ಮೇಕೆಗಳಿಗೆ ಪೂರ್ಣ ವಿಮೆ ಮಾಡಬೇಕಾದರೆ ಬಹಳ ವಿಚಾರ ಮಾಡಬೇಕಾಗುತ್ತದೆ, ಅದರ ಬಗ್ಗೆ ಚಿಂತನೆ ಕೂಡ ಮಾಡುತ್ತಿದ್ದೇವೆ. ಗೌರವಾನ್ವಿತ ಸದಸ್ಯರು ಹೇಳಿದಂತೆ ಔಷಧಗಳ ಬಗ್ಗೆ ಕೊರತೆಯಿದೆಯೆಂದು ನಾನು ಸಹ ಹೇಳಿದ್ದೇನೆ. ನಮ್ಮ ಕುರಿಗಳಿಗೆ ಜ್ವರ ಬಂದಾಗ ಎಮರ್ಜೆನ್ಸಿಯಾಗಿ ನಮ್ಮ ಡಿ.ಸಿ.ಬಿಲ್ ಫಂಡ್ ಇರುತ್ತದೆ. ಆ ಫಂಡ್ ನೆರವಿನಿಂದ ಎಲ್ಲಿಯೂ ಕೊರತೆಯಾಗದಂತೆ ನೋಡಿಕೊಳ್ಳುತ್ತೇವೆಂದು ತಮ್ಮ ಮೂಲಕ ಹೇಳುತ್ತೇನೆ.

ಅಧ್ಯಕ್ಷರೇ:– ನೆ.ಲ. ನರೇಂದ್ರಬಾಬು, ನಿಮ್ಮ ಪ್ರಶ್ನೆಗೆ ಎರಡು ವಾರಗಳ ಕಾಲ ಕಾಲಾವಕಾಶ ಕೇಳಿದ್ದಾರೆ, ಅದರೆ ಆದಷ್ಟು ಬೇಗ ಉತ್ತರ ಕೊಡಿಸುತ್ತೇನೆ. ಸಚಿವರು ಎರಡು ವಾರಗಳ ಕಾಲಾವಕಾಶ ಕೇಳಿದರೆ, 3ನೇ ತಾರೀಕು ಅಧಿವೇಶನ ಮುಗಿಯುತ್ತದೆ. ತಾವು ಮುಂದಿನ ವಾರ ಉತ್ತರ ಕೊಡಬೇಕು. ಆಯಿತು, ನರೇಂದ್ರಬಾಬು ತಮಗೆ ಮುಂದಿನ ವಾರ ಉತ್ತರ ಕೊಡಿಸುತ್ತೇನೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ಇದು ಯಾವ ದೊಡ್ಡ ಪ್ರಶ್ನೆ, ಅವರು ಹೇಳಲಿ, ಬಾಲ ಕಾರ್ಮಿಕರ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇಲ್ಲವೇ? ಏನು ಹೀಗೆ ಹೇಳಿದರೆ, ನಿಮ್ಮ ಇಲಾಖೆಯನ್ನು ಮುಚ್ಚಿಬಿಟ್ಟಿದ್ದೀರಾ ಹೇಗೆ? ಎರಡು ವಾರ ಮುಂದು ಹೋಗುವುದು ಎಂದರೆ ಹೇಗೆ, ಮೂರನೇ ತಾರೀಕು ಶಾಸನಸಭೆ ಮುಕ್ತಾಯವಾಗುತ್ತದೆ.

ಅಧ್ಯಕ್ಷರು:– ಸಚಿವರು ಕಾಲಾವಕಾಶ ಕೇಳಿದ್ದಾರೆ, ಮುಂದಿನ ವಾರ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಸಚಿವರು):– ಉತ್ತರವನ್ನು ಸವಿವರವಾಗಿ ಮುಂದಿನ ವಾರ ಕೊಡುತ್ತೇನೆ.

ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳ ಬಗ್ಗೆ

204 (1265) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) :– ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2005–06, 2006–07ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ;

(ಆ) ಹುಬ್ಬಳ್ಳಿ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳು ಇವೆಯೇ;

(ಇ) ಹುಬ್ಬಳ್ಳಿಯ ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಇರುವ ಆಡಳಿತಾತ್ಮಕ ತೊಂದರೆಗಳೇನು;

(ಈ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

(ಅ) ಪ್ರಾರಂಭಿಸಿಲ್ಲ.

(ಆ) ಇಲ್ಲ

(ಇ) ತೊಂದರೆಗಳಿಲ್ಲ